**ಎಸ್.ಸಿ. ನಂ. 10/2019**

**ದೋ.ಸಾ. : 69 ಫ್ರಾ.ಸಾ. : 61**

ಸಾಕ್ಷಿಯ ಹೆಸರು : ಶಿವಕುಮಾರ್ ಕೆ. ಆರ್

**ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

21. ನಂತರ 2 ನೇ ಆರೋಪಿಯು ಕಾರನ್ನು ನಿಲ್ಲಿಸಿಟ್ಟ ಗ್ಯಾರೇಜಿನ ಮಾಲೀಕರಾದ ಚಾಸಾ-32 ರವರನ್ನು ವಿಚಾರಣೆ ಮಾಡಿದಾಗ, ಆತ ದಿ.20-10-2018 ರಂದು ಬೆಳಿಗ್ಗೆ 10.35 ಗಂಟೆಗೆ 1 ನೇ ಆರೋಪಿಯು ನನಗೆ ಕರೆ ಮಾಡಿ, 2 ನೇ ಆರೋಪಿಯು ನಿಲ್ಲಿಸಿಟ್ಟ ಕಾರನ್ನು ಎಲ್ಲಿಯಾದರೂ ಹುಗಿದು ಹಾಕು ಅಥವಾ ಅದನ್ನು scrap ಮಾಡು ಮತ್ತು ಕಾರಿನ ನಂಬರ್ ಪ್ಲೇಟನ್ನು ತೆಗೆದು ಇಡು ಎಂದು ಹೇಳಿದ್ದು, ಅದು ನನ್ನ ಮೊಬೈಲಿನಲ್ಲಿ ರೆಕಾರ್ಡ್ ಆಗಿರುತ್ತದೆ ಎಂದು ತನ್ನ ವಿವೋ ಕಂಪನಿಯ ಮೊಬೈಲನ್ನು ಹಾಜರುಪಡಿಸಿದ್ದು, ಸದರಿ ಮೊಬೈಲನ್ನು ನಾವು ಪರಿಶೀಲಿಸಿದಾಗ, ಅದರಲ್ಲಿ ಸದರಿ ಸಂಭಾಷಣೆಯು ಇರುವುದು ಕಂಡುಬಂದಿರುತ್ತದೆ. ನಂತರ ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿಕೊಂಡು, ಸದರಿ ಸಿ.ಡಿ.ಯನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು, ಒಂದು ಕವರಿನಲ್ಲಿ ಹಾಕಿ, ಸೀಲು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 4.30 ರಿಂದ 5.00 ಗಂಟೆಯವರೆಗೆ ಮಾಡಿದ್ದು, ಅದನ್ನು ಚಾಸಾ-44 ರವರು ಗಣಕೀಕರಣ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-39 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-39(ಡಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಸಿ.ಡಿ.ಯನ್ನು ಈಗಾಗಲೇ ನಿಪಿ-40 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-40(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಚಾಸಾ-32 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸಿ.ಡಿ.ಯನ್ನು ನ್ಯಾಯಾಲಯದ ಕಂಪ್ಯೂಟರ್ ಗೆ ಅಳವಡಿಸಿ, ಅದರಲ್ಲಿದ್ದ ಆಡಿಯೋವನ್ನು ಪ್ಲೇ ಮಾಡಿ ಕೇಳಲಾಗಿ, ಅದರಲ್ಲಿ ಇಬ್ಬರು ವ್ಯಕ್ತಿಗಳು ಹಿಂದಿ ಭಾಷೆಯಲ್ಲಿ ಮಾತನಾಡಿರುವುದು ಮತ್ತು ಅದರಲ್ಲಿ ಒಂದನೇ ವ್ಯಕ್ತಿಯು ಕಾರು ಎಲ್ಲಿದೆ

ಎಂದು ಕೇಳಿದ್ದು, ಅದಕ್ಕೆ ಎರಡನೇ ವ್ಯಕ್ತಿಯು ಕಾರು ಇಲ್ಲಿಯೇ ಇದೆ ಎಂದು ಹೇಳಿದ್ದು, ನಂತರ ಒಂದನೇ ವ್ಯಕ್ತಿಯು ಸದರಿ ಕಾರಿನ ನಂಬರ್ ಪ್ಲೇಟ್ ತೆಗೆದಿಡು ಹಾಗೂ ಕಾರನ್ನು ಮುಚ್ಚಿಡು ಎಂದು ಹೇಳಿರುವುದು ಕಂಡುಬಂದಿರುತ್ತದೆ.

22. ಆನಂತರ ಅದೇ ದಿನ 2 ನೇ ಆರೋಪಿಯು ದಿ.12-10-2018 ರಂದು ಬೆಳಗಾವಿಯ ಶಾಂತೇಶ್ ಮೋಟಾರ್ಸ್ ನಲ್ಲಿ ಜೆನ್ ಕಾರನ್ನು ಖರೀದಿಸಿದ ಬಗ್ಗೆ ಅಲ್ಲಿನ ವ್ಯವಸ್ಥಾಪಕರಿಗೆ ಮಾಹಿತಿ ನೀಡುವಂತೆ ನೋಟಿಸ್ ಜಾರಿ ಮಾಡಿರುತ್ತೇನೆ. ಸದರಿ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-94 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-94(ಬಿ) ಎಂದು ಗುರುತಿಸಲಾಯಿತು. ಸದರಿ ನೋಟಿಸಿಗೆ ಉತ್ತರವಾಗಿ, ಚಾಸಾ-51 ರವರು ನಮ್ಮ ಬಳಿ "2 ನೇ ಆರೋಪಿಯು ದಿ.12-10-2018 ರಂದು ಸದರಿ ಜೆನ್ ಕಾರನ್ನು ರೂ.45,090/- ಗಳಿಗೆ ಖರೀದಿ ಮಾಡಿರುತ್ತಾನೆ" ಎಂದು ಹೇಳಿದ್ದು, ಅದನ್ನು ನಾವು ತೆಗೆದುಕೊಂಡು ಹೋಗಿದ್ದ ಲ್ಯಾಪ್‌ಟಾಪ್ ನ ಮೂಲಕ ಗಣಕೀಕರಣ ಮಾಡಿ, ಅದಕ್ಕೆ ಚಾಸಾ-51 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಅದರೊಂದಿಗೆ ಚಾಸಾ-51 ರವರು ಕಾರನ್ನು ಖರೀದಿಸಿದ ಬಗ್ಗೆ ಕೆಲವು ದಾಖಲೆಗಳನ್ನು ನೀಡಿದ್ದು, ಅವುಗಳನ್ನೂ ಸಹ ಪಡೆದುಕೊಂಡಿರುತ್ತೇನೆ. ಚಾಸಾ-51 ರವರು ನೀಡಿದ ಉತ್ತರವನ್ನು ಈಗಾಗಲೇ ನಿಪಿ-95 ಎಂದು, ದಾಖಲೆಗಳನ್ನು ನಿಪಿ-96, 97 ಮತ್ತು 98 ಎಂದು ಗುರುತಿಸಲಾಗಿರುತ್ತದೆ.

23. ಆನಂತರ ಕಾರವಾರದ ಠಾಣೆಗೆ ವಾಪಾಸು ಬಂದು, ಜಪ್ತುಪಡಿಸಿಕೊಂಡ ವಸ್ತುಗಳನ್ನು ಸ್ವತ್ತುಪಟ್ಟಿ ಅಳವಡಿಸಿ, ಪಂಚನಾಮೆ ಮತ್ತು ಸ್ವತ್ತುಗಳನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ತನಿಖೆಗೆ ಸಹಕರಿಸಿದ ಬಗ್ಗೆ ಚಾಸಾ-41, 43, 44 ಮತ್ತು 47 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ 2 ನೇ ಆರೋಪಿಯು ದಾಂಡೇಲಿಯ ಸೈಂಟ್ ಮಿಲಾಗ್ರಿಸ್ ಸೊಸೈಟಿ, 3 ನೇ ಆರೋಪಿಯು ಉಳವಿಯ ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ್ ಹಾಗೂ ಜೊಯ್ಡಾದ ಸೈಂಟ್ ಮಿಲಾಗ್ರಿಸ್ ಸೊಸೈಟಿ ಗಳಲ್ಲಿ ಖಾತೆ ತೆರೆಯುವ ಸಂದರ್ಭದಲ್ಲಿ ನೀಡಿದ ದಾಖಲೆಗಳನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ಅದರಂತೆ, ಸದರಿ ಬ್ಯಾಂಕಿನವರು 2 ಮತ್ತು 3 ನೇ ಆರೋಪಿತರ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದ್ದು, ಅವುಗಳನ್ನು ಚಾಸಾ-41 ರವರು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದ್ದು,

ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ಅವುಗಳನ್ನು ತನಿಖೆಗಾಗಿ ನನ್ನ ಬಳಿಯಲ್ಲಿ ಇಟ್ಟುಕೊಂಡಿರುತ್ತೇನೆ.

24. 2 ಮತ್ತು 3 ನೇ ಆರೋಪಿತರು ತಮ್ಮ ಸ್ವ-ಖುಷಿ ಹೇಳಿಕೆಗಳಲ್ಲಿ ಕೃತ್ಯಕ್ಕೆ ಬಳಸಿದ ಕತ್ತಿಯನ್ನು ಖರೀದಿಸಿದ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ದಿ.28-10-2018 ರಂದು ಸದರಿ ಆರೋಪಿತರನ್ನು, ಸಿಬ್ಬಂದಿಯನ್ನು ಮತ್ತು ಪಂಚರನ್ನು ಕರೆದುಕೊಂಡು ಮಧ್ಯಾಹ್ನ 12.15 ಗಂಟೆಗೆ ಠಾಣೆಯಿಂದ ಹೊರಟು, 2 ನೇ ಆರೋಪಿಯು ಕಾರವಾರದ ಸಂಡೇ ಮಾರ್ಕೆಟ್ ಒಳಗೆ ಒಂದು ಕತ್ತಿಯನ್ನು ಖರೀದಿಸಿದ ಸ್ಥಳವಾದ ಚಾಸಾ-31 ರವರ ಅಂಗಡಿಗೆ ಕರೆದುಕೊಂಡು ಹೋಗಿ, ತಾನು ಇದೇ ಅಂಗಡಿಯಲ್ಲಿ ಕತ್ತಿಯನ್ನು ಖರೀದಿಸಿದ ಅಂಗಡಿ ಎಂದು ಹೇಳಿದ ಮೇರೆಗೆ ಚಾಸಾ-31 ರವರನ್ನು ವಿಚಾರಣೆ ಮಾಡಿ, ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಸದರಿ ಪಂಚನಾಮೆಯನ್ನು ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿಸಿರುತ್ತೇನೆ ಹಾಗೂ ಆ ಸಮಯದಲ್ಲಿ ನಿಪಿ-42 ರಂತೆ ಫೋಟೊ ತೆಗೆಸಿರುತ್ತೇನೆ. ಸ್ಥಳದಲ್ಲಿ ಚಾಸಾ-31 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ 2 ಮತ್ತು 3 ನೇ ಆರೋಪಿತರು ಕೃತ್ಯಕ್ಕೆ ಬಳಸಿದ ಇನ್ನೊಂದು ಕತ್ತಿಯನ್ನು ಖರೀದಿಸಿದ ಇನ್ನೊಂದು ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ, ನಾವು ಮತ್ತು ಪಂಚರು 2 ಮತ್ತು 3 ನೇ ಆರೋಪಿತರೊಂದಿಗೆ ಅಣಸಿ ಗ್ರಾಮಕ್ಕೆ ಹೋಗಿ, ಉಳವಿ-ಕುಂಬಾರವಡ ರಸ್ತೆಗೆ ಹೊಂದಿಕೊಂಡಿರುವ ಕಚ್ಚಾ ರಸ್ತೆಯಲ್ಲಿ ನಡೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿತರು ಚಾಸಾ-29 ರವರ ಮನೆಯನ್ನು ತೋರಿಸಿ, ತಾವು ಇದೇ ಮನೆಯವರಿಗೆ ಒಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿಯನ್ನು ಮಾಡಿಕೊಡುವಂತೆ ಕೇಳಿಕೊಂಡಿದ್ದು, ಅದಾದ 3-4 ದಿನಗಳ ನಂತರ ಕತ್ತಿ ಪಡೆದುಕೊಳ್ಳಲು ಹೋದಾಗ, ಚಾಸಾ-29 ರವರು ಕತ್ತಿ ಇನ್ನೂ ತಯಾರಾಗಿಲ್ಲ ಎಂದು ಹೇಳಿದ್ದರಿಂದ, 2 ಮತ್ತು 3 ನೇ ಆರೋಪಿತರು ಚಾಸಾ-29 ರವರ ಬಳಿ ಈಗಾಗಲೇ ಮಾಡಿಟ್ಟ ಒಂದು ಕತ್ತಿಯನ್ನು ಖರೀದಿ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ. ಆನಂತರ ನಾವು ಚಾಸಾ-29 ರವರನ್ನು ನಾವು ವಿಚಾರಣೆ ಮಾಡಿದಾಗ, 2 ಮತ್ತು 3 ನೇ ಆರೋಪಿತರು ತಮ್ಮ ಮನೆಗೆ ಬಂದು, ಕತ್ತಿ ಮಾಡಿಕೊಡುವಂತೆ ಕಬ್ಬಿಣದ ಪಟ್ಟಿಯನ್ನು ನೀಡಿ ಹೋಗಿದ್ದು, ಅದು ತಯಾರಾಗಿಲ್ಲದ ಕಾರಣ, ಮತ್ತೊಂದು ಕತ್ತಿಯನ್ನು ಖರೀದಿ ಮಾಡಿ ಹೋಗಿರುತ್ತಾರೆ ಎಂದು ಹೇಳಿರುತಾರೆ ಹಾಗೂ 2 ಮತ್ತು 3 ನೇ ಆರೋಪಿತರು ನೀಡಿದ್ದ ಕಬ್ಬಿಣದ ಪಟ್ಟಿಯನ್ನು ತಂದು

ಹಾಜರುಪಡಿಸಿರುತ್ತಾರೆ. ಸದರಿ ಕಬ್ಬಿಣದ ಪಟ್ಟಿಯನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರ ಮೇಲೆ front ಎಂದು ಬರೆದಿರುತ್ತದೆ, ನಂತರ ನಾನು ಸದರಿ ಕಬ್ಬಿಣದ ಪಟ್ಟಿಯನ್ನು ನಿಪಿ–56 ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ನಿಪಿ–32 ರಂತೆ ಫೋಟೊ ತೆಗೆಸಿರುತ್ತೇನೆ. ಸದರಿ ನಿಪಿ–56 ಪಂಚನಾಮೆಯನ್ನು ಮಧ್ಯಾಹ್ನ 12.15 ರಿಂದ ಸಂಜೆ 4.00 ಗಂಟೆಯವರೆಗೆ ಮಾಡಿರುತ್ತೇನೆ ಹಾಗೂ ಅದನ್ನು ಚಾಸಾ–44 ರವರು ಗಣಕೀಕರಣ ಮಾಡಿರುತ್ತಾರೆ. ಸ್ಥಳದಲ್ಲಿ ಚಾಸಾ–29 ಮತ್ತು 30 ರವರ ಹೇಳಿಕೆಗಳನ್ನೂ ಸಹ ಪಡೆದುಕೊಂಡಿರುತ್ತೇನೆ. ನಿಪಿ–56 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–56(ಎಫ್) ಮತ್ತು 56(ಜಿ) ಎಂದು ಗುರುತಿಸಲಾಯಿತು. ಕಬ್ಬಿಣದ ಪಟ್ಟಿಯನ್ನು ಈಗಾಗಲೇ ಎಂ.ಓ–12 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–12(ಸಿ) ಎಂದು ಗುರುತಿಸಲಾಯಿತು. ಆನಂತರ ಠಾಣೆಗೆ ವಾಪಾಸು ಬಂದು, ಜಪ್ತುಪಡಿಸಿಕೊಂಡ ವಸ್ತುಗಳನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿ, ಪಂಚನಾಮೆ ಮತ್ತು ಸ್ವತ್ತುಗಳನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

25. 3 ನೇ ಆರೋಪಿಯು ಕೃತ್ಯಕ್ಕೆ ಬಳಸಿದ ಮೋಟಾರು ಸೈಕಲ್ ನಂ.ಕೆಎ–65/ಹೆಚ್–2843 ನೇದರ ಮಾಲೀಕರಾದ ಚಾಸಾ–26 ರವರು ದಿ.29–10–2018 ರಂದು ಮೋಟಾರು ಸೈಕಲನ್ನು ಠಾಣೆಯಲ್ಲಿ ಹಾಜರುಪಡಿಸಿದ್ದು, ಚಾಸಾ–5 ಮತ್ತು 6 ರವರನ್ನು ಪಂಚರಾಗಿ ಬರಮಾಡಿಕೊಂಡು, ಸದರಿ ಪಂಚರ ಸಮಕ್ಷಮ ಚಾಸಾ–26 ರವರು ಹಾಜರುಪಡಿಸಿದ ಮೋಟಾರು ಸೈಕಲನ್ನು ನಿಪಿ–49 ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡಿರುತ್ತೇನೆ ಹಾಗೂ ನಿಪಿ–50 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–49 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–49(ಸಿ) ಎಂದು ಗುರುತಿಸಲಾಯಿತು. ನಿಪಿ–50 ಫೋಟೊದಲ್ಲಿರುವ ಮೋಟಾರು ಸೈಕಲನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಮೋಟಾರು ಸೈಕಲನ್ನು ಅದರ ಮಾಲೀಕರಾದ ಚಾಸಾ–26 ರವರು ಈಗಾಗಲೇ ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಚಾಸಾ–26 ರವರ ಹೇಳಿಕೆಯನ್ನೂ ಸಹ ಪಡೆದುಕೊಂಡಿರುತ್ತೇನೆ. ಜಪ್ತುಪಡಿಸಿಕೊಂಡ ಮೋಟಾರು ಸೈಕಲನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿ, ಪಂಚನಾಮೆ ಮತ್ತು ಮೋಟಾರು ಸೈಕಲನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

26. ನಂತರ 1 ನೇ ಆರೋಪಿಗೆ ಸಂಬಂಧಿಸಿದ ಕಾರವಾರದ ಶಿಪ್ಪಿಂಗ್ ಏಜೆನ್ಸಿಯಲ್ಲಿ ಕೆಲಸಕ್ಕೆ ಇದ್ದ, 4 ಮತ್ತು 5 ನೇ ಆರೋಪಿತರ ಬಳಿ 1 ನೇ ಆರೋಪಿಯ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ದಿ.31-10-2018 ರಂದು ಮೃತನ ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿದ ಮಾದರಿಗಳನ್ನು ಚಾಸಾ-47 ರವರು ಪಡೆದುಕೊಂಡು ಬಂದು, ನನ್ನ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ಜಪ್ತುಪಡಿಸಿಕೊಳ್ಳಲು ಚಾಸಾ-11 ಮತ್ತು 12 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಸದರಿ ಪಂಚರ ಸಮಕ್ಷಮ ಚಾಸಾ-47 ರವರು ಹಾಜರುಪಡಿಸಿದ ವಸ್ತುಗಳನ್ನು ನಿಪಿ-57 ಪಂಚನಾಮೆಯಡಿ ಜಪ್ತುಪಡಿಸಿಕೊಂಡಿರುತ್ತೇನೆ. ನಿಪಿ-57 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-57(ಡಿ) ಎಂದು ಗುರುತಿಸಲಾಯಿತು. ಶವದ ಕೆಳಗಿನ ಮಣ್ಣನ್ನು ಈಗಾಗಲೇ ಎಂ.ಓ-19 ಎಂದು, ಶವದ ಸುತ್ತಲಿನ ಮಣ್ಣನ್ನು ಎಂ.ಓ-20 ಎಂದು, ಮತ್ತು sternum bone ನ್ನು ಎಂ.ಓ-21 ಎಂದು, ಗುರುತಿಸಲಾಗಿರುತ್ತದೆ. 2 ಮತ್ತು 3 ನೇ ಆರೋಪಿತರ ಪೊಲೀಸ್ ಕಸ್ಟಡಿ ಅವಧಿ ಮುಗಿದಿದ್ದರಿಂದ, ಸದರಿ ಆರೋಪಿತರನ್ನು ಅದೇ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

27. ಅದೇ ದಿನ ಜೊಯ್ಡಾದ ಲೋಕೋಪಯೋಗಿ ಇಲಾಖೆಯವರು ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿ ಕವಚ ಪತ್ರದೊಂದಿಗೆ ನೀಡಿದ್ದು, ಅದನ್ನು ಚಾಸಾ-41 ರವರು ಪಡೆದುಕೊಂಡು ಬಂದು ನನಗೆ ನೀಡಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ನಕಾಶೆಯನ್ನು ಈಗಾಗಲೇ ನಿಪಿ-52 ಎಂದು, ಕವಚ ಪತ್ರವನ್ನು ನಿಪಿ-53 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-53(ಎ) ಎಂದು ಗುರುತಿಸಲಾಯಿತು. ದಿ.03-11-2018 ರಂದು 4 ಮತ್ತು 5 ನೇ ಆರೋಪಿತರ ಹಾಗೂ ಚಾಸಾ-32 ರವರ ಕಲಂ.164 ರಡಿಯಲ್ಲಿ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಈ ಹಿಂದೆ ಪಡೆದುಕೊಂಡಿದ್ದಂತಹ 1 ಮತ್ತು 2 ನೇ ಆರೋಪಿತರ ಹಾಗೂ ಮೃತನ ಸಿ.ಡಿ.ಆರ್. ಗಳನ್ನು ಪರಿಶೀಲಿಸಿದಾಗ, 1 ನೇ ಆರೋಪಿಯೊಂದಿಗೆ ನಿರಂತರವಾಗಿ 17 ನಂಬರುಗಳಲ್ಲಿ ಸಂಪರ್ಕದಲ್ಲಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ 17 ನಂಬರುಗಳ ಸಿ.ಡಿ.ಆರ್. ಹಾಗೂ 14 ನಂಬರುಗಳ ಸಿ.ಎ.ಎಫ್. ಗಳನ್ನು ಒದಗಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರವರಲ್ಲಿ ಎರಡು ಕೋರಿಕೆ ಪತ್ರಗಳ ಮೂಲಕ ಕೋರಿಕೊಂಡಿರುತ್ತೇನೆ ಹಾಗೂ ಮಾಹಿತಿ ಕೇಳಿದ ಎಲ್ಲಾ ನಂಬರುಗಳನ್ನು ಕೋರಿಕೆ ಪತ್ರದಲ್ಲಿ

ನಮೂದಿಸಿರುತ್ತೇನೆ. ಎರಡು ಕೋರಿಕೆ ಪತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-161 ಮತ್ತು 162 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-161(ಎ) ಮತ್ತು 162(ಎ) ಎಂದು ಗುರುತಿಸಲಾಯಿತು.

28. ಆನಂತರ ದಿ.04-11-2018 ರಂದು ವಲಯ ಅರಣ್ಯಾಧಿಕಾರಿಗಳು, ವನ್ಯಜೀವಿ ವಲಯ, ಅಣಸಿ ರವರು ನಮ್ಮ ಕೋರಿಕೆಗೆ ಉತ್ತರವಾಗಿ ದಿ.16-10-2018 ರಂದು ಅಣಸಿ ವನ್ಯ ಜೀವಿ ವಲಯದ ಸಾಕಳಿ ಚೆಕ್ ಪೋಸ್ಟ್ ನಲ್ಲಿ ಮಾರುತಿ ಜೆನ್ ಕಾರು ನೋಂದಣಿ ನಂ. ಎಂ.ಹೆಚ್/04-ಬಿಕೆ-0726 ಹಾದು ಹೋಗಿರುವುದು ಚೆಕ್ ಪೋಸ್ಟ್ ನ ರಿಜಿಸ್ಟರಿನಲ್ಲಿ ದಾಖಲಾಗಿರುತ್ತದೆ ಎಂದು ಸದರಿ ರಿಜಿಸ್ಟರಿನ ದೃಢೀಕೃತ ಪ್ರತಿಯನ್ನು ನೀಡಿರುತ್ತಾರೆ ಹಾಗೂ ಆ ದಿನ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ಮಾಹಿತಿಯನ್ನು ಕವಚ ಪತ್ರದಲ್ಲಿ ನೀಡಿರುತ್ತಾರೆ ಮತ್ತು ಘಟನಾ ಸ್ಥಳಗಳ ಆರ್.ಟಿ.ಸಿ.ಯನ್ನು ನೀಡಿರುತ್ತಾರೆ. ವಲಯ ಅರಣ್ಯಾಧಿಕಾರಿಗಳು ನೀಡಿದ ರಿಜಿಸ್ಟರ್ ಪ್ರತಿಯನ್ನು ಈಗಾಗಲೇ ನಿಪಿ-54 ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ವಾಹನದ ಬಗ್ಗೆ ನಮೂದು ಇರುವ ಭಾಗವನ್ನು ನಿಪಿ-54(ಎ) ಎಂದು ಗುರುತಿಸಲಾಯಿತು. ಕವಚ ಪತ್ರವನ್ನು ಈಗಾಗಲೇ ನಿಪಿ-133 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಹಿಯನ್ನು ನಿಪಿ-133(ಬಿ) ಎಂದು ಗುರುತಿಸಲಾಯಿತು. ಆರ್.ಟಿ.ಸಿ. ಯನ್ನು ಈಗಾಗಲೇ ನಿಪಿ-136 ಎಂದು ಗುರುತಿಸಲಾಗಿರುತ್ತದೆ. ಪಹಣಿ ಪತ್ರಿಕೆಗೆ ಕೋರಿ ಸಲ್ಲಿಸಿದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-135 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಹಿಯನ್ನು ನಿಪಿ-135(ಎ) ಎಂದು ಗುರುತಿಸಲಾಯಿತು.

29. ದಿ.05-11-2018 ರಂದು 4 ಮತ್ತು 5 ನೇ ಆರೋಪಿತರ ಹಾಗೂ ಚಾಸಾ-32 ರವರ ಕಲಂ.164 ರ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ-32 ರವರ ಹೇಳಿಕೆಯನ್ನು ಈಗಾಗಲೇ ನಿಪಿ-41 ಎಂದು ಗುರುತಿಸಲಾಗಿರುತ್ತದೆ. 4 ಮತ್ತು 5 ನೇ ಆರೋಪಿತರ ಕಲಂ.164 ರಡಿಯಲ್ಲಿಯ ಹೇಳಿಕೆಯನ್ನು ನಿಪಿ-163 ಮತ್ತು ನಿಪಿ-164 ಎಂದು ಗುರುತಿಸಲಾಯಿತು. ಅದೇ ದಿನ ಕಾರವಾರದ ಪರಿಸರ ಅಧಿಕಾರಿಗಳಿಗೆ ಅವರ್ಸದ ಡಾಂಬರ್ ಪ್ಲಾಂಟ್ ವಿಷಯಕ್ಕೆ ಸಂಬಂಧಿಸಿದಂತೆ

ಈ ಪ್ರಕರಣದ 1 ನೇ ಆರೋಪಿ ಹಾಗೂ ಮೃತನ ವಿರುದ್ಧ ದೂರು–ಪ್ರತಿದೂರು ದಾಖಲಾಗಿದ್ದಲ್ಲಿ ಮಾಹಿತಿ ನೀಡುವಂತೆ ಕೋರಿಕೊಂಡಿರುತ್ತೇನೆ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ